# ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ.

ನಂ 371/5 9ನೇ ಮೈನ್ 50ಅಡಿ ರಸ್ತೆ ಹನುಮಂತನಗರ ಬೆಂಗಳೂರು-19 ದೂ: 080-26621893/892

## ದಿವಂಗತ ಎಂ.ವಿ. ಸೂರ್ಯನಾರಾಯಣ ಮರಣೋತ್ತರ ಪರಿಹಾರ ಯೋಜನೆಯಲ್ಲಿ ನೋಂದಾಯಿಸಲು ಅರ್ಜಿ.

ಅರ್ಜಿ ಸಂಖ್ಯೆ : ದಿನಾಂಕ :

| | |
|---|---|
| 1. ಸದಸ್ಯರ ಹೆಸರು : | 2. ಸದಸ್ಯತ್ವ ಸಂಖ್ಯೆ : |
| 3. ಜನ್ಮ ದಿನಾಂಕ : | 4. ವಯಸ್ಸು : |
| 5. ತಂದೆ/ಗಂಡನ ಹೆಸರು:<br>ಅಂಚೆ ವಿಳಾಸ : | ಅರ್ಜಿದಾರರ ಭಾವಚಿತ್ರ |
| 6. ಖಾಯಂ ವಿಳಾಸ : | |
| 7. ಸಹಕಾರಿಯಲ್ಲಿ ಹಾಲಿ ವ್ಯವಹರಿಸುತ್ತಿರುವ ಖಾತೆಗಳು : 1). ಷೇರುಧನ ರೂ:<br>2). ಖಾಯಂ ಠೇವಣಿ ರೂ: | 3) ಚೀಟಿ ಖಾತೆ ರೂ : |
| 7. ಇ-ಮೇಲ್ | |
| 8. ದೂರವಾಣಿ ಸಂಖ್ಯೆ : | 8. ಮೊ : |
| 1. **ನಾಮಿನಿದಾರರ ಹೆಸರು** : | 2. ಸದಸ್ಯತ್ವ ಸಂಖ್ಯೆ : |
| 3. ಜನ್ಮ ದಿನಾಂಕ : | 4. ವಯಸ್ಸು : |
| 5. ಅಂಚೆ ವಿಳಾಸ : | ನಾಮಿನಿದಾರರ ಭಾವಚಿತ್ರ |
| 6. ಸಂಬಂಧ : | ಮೊ : |
| 7. ದೂರವಾಣಿ ಸಂಖ್ಯೆ : | 8. ಇ-ಮೇಲ್ : |

ಈ ಯೋಜನೆಯ ಎಲ್ಲಾ ನಿಬಂದನೆಗಳನ್ನು ಓದಿ/ಓದಿಸಿ ತಿಳಿದುಕೊಂಡಿರುತ್ತೇನೆ. ಮತ್ತು ಸಹಕಾರಿಯ ಹಾಲಿ ಮತ್ತು ಮುಂದೆ ಬರಬಹುದಾದ ನಿಯಮಗಳಿಗೆ ಬದ್ದನಾಗಿರುತ್ತೇನೆ. ಎಂದು ಒಪ್ಪಿ ಸಹಿ ಹಾಕಿರುತ್ತೇನೆ.

ಸದಸ್ಯರ ಸಹಿ

ಅಧ್ಯಕ್ಷರ ಅನುಮೋದನೆ ಮತ್ತು ಸಹಿ

ಪು.ತಿ.ನೋ

ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ. ಹನುಮಂತನಗರ ಬೆಂಗಳೂರು-19 .

**ದಿವಂಗತ ಎಂ.ವಿ. ಸೂರ್ಯನಾರಾಯಣ ಮರಣೋತ್ತರ ಪರಿಹಾರ ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಪಾಲಿಸಬೇಕಾದ ನಿಬಂಧನೆಗಳು.**

1. ಉದಯ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಪೂರ್ಣ ಸದಸ್ಯತ್ವ ಹೊಂದಿರಬೇಕು.
2. ಸಹಸದಸ್ಯತ್ವ ಮತ್ತು ನಾಮಮಾತ್ರ ಸದಸ್ಯತ್ವ ಹೊಂದಿದವರು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ.
3. ಸದಸ್ಯರು ಸಹಕಾರಿಯಲ್ಲಿ ಗರಿಷ್ಠ ವ್ಯಹಾರದಲ್ಲಿ ತೊಡಗಿಸಿಕೊಂಡಿರಬೇಕು.
4. ಈ ಯೋಜನೆಯ ಸೌಲಭ್ಯ ಪಡೆಯಲು ಸಹಕಾರಿಯು ನೀಡುವ ನಿಗಧಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು. ಫೋಟೋ ಐಡಿ. ವಿಳಾಸ ಧೃಡೀಕರಣ ಮತ್ತು ವಯಸ್ಸಿನ ದೃಢೀಕರಣ ಪತ್ರ ನೀಡಿ ಹೆಸರನ್ನು ನೊಂದಾಯಿಸಿಕೊಳ್ಳಬಹುದು.
5. ಯಾವುದೇ ಹೊಸ ವ್ಯಕ್ತಿಗಳು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಚಿಸಿದರೆ, ಅವರ ವಯೋಮಿತಿ 60 ವರ್ಷಗಳ ಒಳಗಿರಬೇಕು. ಮತ್ತು ಅಂತಹ ಸದಸ್ಯತ್ವವನ್ನು ಕಾರ್ಯಕಾರಿ ಮಂಡಳಿಯಲ್ಲಿ ತೀರ್ಮಾನಿಸಲಾಗುವುದು. ಕಾರ್ಯಕಾರಿ ಮಂಡಳಿ ಇಚ್ಚಿಸಿದಲ್ಲಿ ವೈಧ್ಯಕೀಯ ಪ್ರಮಾಣ ಪತ್ರ ಅವಶ್ಯಕವಾಗಿರುತ್ತದೆ.
6. ಈ ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ನಿಗಧಿತ 2500/- ರೂಗಳನ್ನು ಪಾವತಿಸಬೇಕು. ಇದನ್ನು 1250 ರೂನಂತೆ 2 ಕಂತುಗಳಲ್ಲಿಯೂ(ಒಂದು ತಿಂಗಳ ಒಳಗೆ) ಪಾವತಿಸಬಹುದು. ಆದರೆ ಪೂರ್ತಿಯಾಗಿ 2500/- ರೂ ಗಳನ್ನು ಪಾವತಿಸಿದರೆ ಮಾತ್ರ ಈ ಯೋಜನೆಗೆ ಹೆಸರನ್ನು ನೊಂದಾಯಿಸಿಕೊಳ್ಳಲಾಗುವುದು. ಇಲ್ಲದಿದ್ದಲ್ಲಿ 1250 ರೂ ಗಳನ್ನು ವಾಪಸ್ಸು ನೀಡಲಾಗುವುದು.
7. ಈ ಯೋಜನೆಯಲ್ಲಿ ತೊಡಗಿಸಿಕೊಂಡವರಿಗೆ ಸಹಕಾರಿಯಿಂದ ಪ್ರಮಾಣಪತ್ರವನ್ನು ನೀಡಲಾಗುವುದು.
8. ಒಬ್ಬ ಸದಸ್ಯರು ಒಂದು ಪ್ರಮಾಣ ಪತ್ರ ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ. ಹೆಚ್ಚಿನ ಹಣ ನೀಡಿ ಹೆಚ್ಚಿನ ಪ್ರಮಾಣ ಪತ್ರ ಪಡೆಯಲು ಅವಕಾಶವಿರುವುದಿಲ್ಲ.
9. ಈ ಯೋಜನೆಯಲ್ಲಿ ನೊಂದಾಯಿಸಿಕೊಂಡ ಸದಸ್ಯರ ಮರಣಾನಂತರ ಸದಸ್ಯರು ಪ್ರಮಾಣಪತ್ರದಲ್ಲಿ ಸೂಚಿಸಿರುವ ನಾಮಿನಿದಾರರು ಫೋಟೋ ಐಡಿ, ವಿಳಾಸದ ದೃಢೀಕರಣ ಪತ್ರ ಮತ್ತು ನೋಂದಾಯಿತ ಸದಸ್ಯರ ಮರಣ ಪ್ರಮಾಣ ಪತ್ರ ಮುಂತಾದ ದಾಖಲೆಗಳನ್ನು ಒದಗಿಸಿ ಪರಿಹಾರದ ಮೊತ್ತ ಪಡೆಯಲು ಅರ್ಹರಾಗಿರುತ್ತಾರೆ.
10. ಈ ಯೋಜನೆಯ ಸದಸ್ಯರು ಸೂಚಿಸಿದ ನಾಮಿನಿದಾರರು ಮರಣ ಹೊಂದಿದಲ್ಲಿ ಮತ್ತೊಬ್ಬ ನಾಮಿನಿಯ ಹೆಸರನ್ನು ಸೂಚಿಸುವ ಅವಕಾಶ ಈ ಯೋಜನೆಯ ನೋದಾಯಿತ ಸದಸ್ಯರಿಗಿರುತ್ತದೆ.
11. ಈ ಯೋಜನೆಯ ಸದಸ್ಯರು ಮತ್ತು ನಾಮಿನಿದಾರರು ಇಬ್ಬರೂ ಮರಣ ಹೊಂದಿದ ಪಕ್ಷದಲ್ಲಿ, ಸಹಕಾರಿಯ ಕಾರ್ಯಕಾರಿ ಮಂಡಳಿಯ ತೀರ್ಮಾನದಂತೆ ಅಂತಹ ಸದಸ್ಯರ ಕುಟುಂಬದವರು (ತಂದೆ, ತಾಯಿ, ಮಕ್ಕಳು) ಮಾತ್ರ ಪರಿಹಾರ ಧನವನ್ನು ಪಡೆಯಬಹುದು. (ಸಂಬಂದಿಕರಿಗೆ ನೀಡಲಾಗುವುದಿಲ್ಲ)
12. ಈ ಯೋಜನೆಯ ಪರಿಹಾರ ಮೊತ್ತವು 25,000/- ರೂ ಗಳಾಗಿರುತ್ತದೆ.
13. ಈ ಯೋಜನೆಯಲ್ಲಿ ನೋಂದಾಯಿಸಿಕೊಳ್ಳುವ ಸದಸ್ಯರು ಮರಣ ಹೊಂದಿದಲ್ಲಿ ತಕ್ಷಣ ಆ ಕುಟುಂಬದ ಸದಸ್ಯರು ಸಹಕಾರಿಗೆ ತಿಳಿಸಬೇಕಾಗಿರುತ್ತದೆ.
14. ಸಹಕಾರಿಯು ಸದಸ್ಯರ ಅಂತ್ಯಕ್ರಿಯೆಗಾಗಿ ಅನುಕೂಲವಾಗುವಂತೆ ತಕ್ಷಣದ ಪರಿಹಾರವಾಗಿ 5,000/ರೂಗಳನ್ನು ನಿರ್ದೇಶಕರ ಸಮ್ಮುಖದಲ್ಲಿ ತಲುಪಿಸಲಾಗುವುದು.
15. ಬಾಕಿ ಮೊತ್ತವನ್ನು ಮರಣ ಹೊಂದಿದ ಸದಸ್ಯರ ಸಹಕಾರಿಯ ಜೊತೆಗಿನ ವೈಯಕ್ತಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಆ ಸದಸ್ಯರಿಂದ ಸಹಕಾರಿಗೆ ಯಾವುದೇ ರೀತಿಯ ಬಾಕಿಯಿದ್ದಲ್ಲಿ ಜಮಾ ಮಾಡಿಕೊಂಡು ಉಳಿದ ಮೊತ್ತವನ್ನು ಅವರ ನಾಮಿನಿದಾರರಿಗೆ ನೀಡಲಾಗುವುದು. ಮರಣ ಹೊಂದಿದ ಸದಸ್ಯರ ಮರಣಪ್ರಮಾಣಪತ್ರದ ನಕಲನ್ನು ನಾಮಿನಿದಾರರು ಸಹಕಾರಿಗೆ ನೀಡಬೇಕು. ಮತ್ತು ಮೂಲಪ್ರಮಾಣಪ್ರತಿಯನ್ನು ಹಾಜರುಪಡಿಸಬೇಕು.
16. ಈ ಯೋಜನೆಯು ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ.ದ ಯೋಜನೆಯಾಗಿದ್ದು ಈ ಪ್ರಮಾಣಪತ್ರವನ್ನು ಬೇರೆ ಯಾವುದೇ ವ್ಯಕ್ತಿಗಳಲ್ಲಿ/ಸಂಸ್ಥೆಗಳಲ್ಲಿ ಒತ್ತೆಯಿಡಲು ಸಾಧ್ಯವಿಲ್ಲ. ಹಾಗೇನಾದರೂ ಕಂಡುಬಂದಲ್ಲಿ ಸಹಕಾರಿಯು ಪರಿಹಾರ ನಿಧಿಯ ಮೊತ್ತವನ್ನು ನೀಡಲಾಗುವುದಿಲ್ಲ.
17. ಈ ಯೋಜನೆಗೆ ಸಹಕಾರಿಯು ಯಾವ ವಿಮಾ ಕಂಪನಿಯೊಂದಿಗೂ ಒಪ್ಪಂದ ಮಾಡಿಕೊಂಡಿರುವುದಿಲ್ಲ.
18. ಈ ಯೋಜನೆಯಲ್ಲಿ ತೊಡಗಿಸಿಕೊಂಡ ಸದಸ್ಯನು ಮರಣ ಹೊಂದಿದ್ದು ಕುಟುಂಬದ ಸದಸ್ಯರಿಗೆ ಸದಸ್ಯನು ಪಡೆದಿರುವ ಪ್ರಮಾಣ ಪತ್ರದ ತಿಳುವಳಿಕೆ ಇಲ್ಲದೇ ಕಾಲಾನಂತರದಲ್ಲಿ ಅವರಿಗೆ ಪ್ರಮಾಣ ಪತ್ರ ದೊರಕಿ ಆ ಸದಸ್ಯರ ನಾಮಿನಿದಾರರು ಸದಸ್ಯರು ಮರಣ ಹೊಂದಿರುವ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಸಹಕಾರಿಯು ನೀಡಿರುವ ಪ್ರಮಾಣ ಪತ್ರದ ಜೊತೆ ಲಗತ್ತಿಸಿ ಸಹಕಾರಿಯಿಂದ ಹಣವನ್ನು ಪಡೆಯಬಹುದಾಗಿರುತ್ತದೆ.
19. ಸಹಕಾರಿಯು ನೀಡಿದ ಪ್ರಮಾಣ ಪತ್ರ ಕಳೆದು ಹೋದಲ್ಲಿ ಕಳೆದು ಹೋದ ಬಗ್ಗೆ ನೋಟರಿ ಮಾಡಿಸಿ ಸಹಕಾರಿಗೆ ತಿಳಿಸಿ ನಕಲು ಪ್ರಮಾಣಪತ್ರವನ್ನು ಪಡೆಯಬಹುದು.
20. ಈ ಯೋಜನೆಯಲ್ಲಿರುವ ಯಾವುದೇ ಸದಸ್ಯರು ಸಹಕಾರಿಯ ಸದಸ್ಯತ್ವವನ್ನು ರದ್ದುಗೊಳಿಸಿದಲ್ಲಿ ಮರಣೋತ್ತರ ನಿಧಿಗಾಗಿ ನೀಡಿದ್ದ ರೂ 2500/- ಗಳನ್ನು ಸಹಕಾರಿಯು ನೀಡಿರುವ ಪ್ರಮಾಣಪತ್ರ ನೀಡಿ ಬಡ್ಡಿರಹಿತವಾಗಿ ವಾಪಸ್ಸು ಪಡೆಯಬಹುದು.
21. ಈ ಯೋಜನೆಗೆ ಸಂಬಂದಪಟ್ಟ ಮೊಕದ್ದಮೆಗಳನ್ನು ಬೆಂಗಳೂರಿನ ನ್ಯಾಯಾಲಯದಲ್ಲಿ ಮಾತ್ರ ಸಲ್ಲಿಸಬೇಕಾಗುತ್ತದೆ.
22. ಸಹಕಾರಿಯು ಪ್ರಮಾಣಪತ್ರ ನೀಡಿದ ದಿನಾಂಕದಿಂದ ಈ ಯೋಜನೆಯ ಪರಿಹಾರ ಪಡೆಯಬಹುದು.
23. ಈ ಯೋಜನೆಗೆ ಸಂಬಂದಿಸಿದ ವಿಷಯಗಳಲ್ಲಿ ಕಾರ್ಯಕಾರಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಈ ಯೋಜನೆಯ ಎಲ್ಲಾ ನಿಯಮಗಳನ್ನು ಓದಿ/ಓದಿಸಿ ತಿಳಿದುಕೊಂಡಿರುತ್ತೇನೆ. ಮತ್ತು ಸಹಕಾರಿಯ ಹಾಲಿ ಮತ್ತು ಮುಂದೆ ಬರಬಹುದಾದ ನಿಯಮಗಳಿಗೆ ಬದ್ದನಾಗಿರುತ್ತೇನೆ. ಎಂದು ಒಪ್ಪಿ ಸಹಿ ಹಾಕಿರುತ್ತೇನೆ.

ಸದಸ್ಯರ ಹೆಸರು :                ಸದಸ್ಯರ ಸಹಿ :